ಪಿ. ಚಿದಾನಂದ, ಜವನಗೊಂಡನಹಳ್ಳಿ

ಹಣವು ಭೂಮಿಯಲ್ಲಿ ಬೆಳೆಯುವಂತಿದ್ದರೆ?




ಬೇರಿನಲ್ಲೇ ತೆರಿಗೆ ಇರುತ್ತಿತ್ತು.

ಕಂಪ್ಲಾಪುರ ಮೋಹನ, ಪಿರಿಯಾಪಟ್ಟಣ

ಜನ್ಮ ನೀಡಿದ ತಂದೆ–ತಾಯಿಗಳನ್ನು ಈಗಲೂ ಕೆಲವು ಮಕ್ಕಳು ಹೊಡೆದು ಬಡಿದು ಮಾಡುವರಲ್ಲಾ...?

ಅಜಾತಶತ್ರು, ಔರಂಗಜೇಬ್, ಕ್ರೋನಸ್‌ರ ಗುಣವದು. ದೂರಿತ್ತು ದೂರಾಗುವುದೇ ಸರಿದಾರಿ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

ಕಿವುಡು ಹೆಂಡತಿ ಮೇಲೋ, ಮೂಕ ಹೆಂಡತಿ ಮೇಲೋ?

ಮೂಕಿಯೇ. ಬೆನ್ನು ತಿರುಗಿಸಿ ಕುಳಿತುಬಿಟ್ಟರೆ ಜಗಳವೇ ಇಲ್ಲ!

ಜೆ.ಆರ್. ಆದಿನಾರಾಯಣಮುನಿ

ಕತ್ತೆಗೆ ಯಾವ ಸಂದರ್ಭದಲ್ಲಿ ಬೆಲೆ ಬರುತ್ತದೆ?



ಈಗಲೇ ಇದೆ. ಎಜಿಯಾವೋ ಔಷಧಿ ತಯಾರಿಕೆಗೆ ಚೀನಾ ಪ್ರತಿವರ್ಷ 18 ಲಕ್ಷ ಕತ್ತೆಗಳನ್ನು ಕೊಲ್ಲುತ್ತಿದೆ.

ಎನ್. ಗೋಪಾಲರಾವ್, ಬೆಂಗಳೂರು

ಒಳ್ಳೆಯ ಪ್ರಶ್ನೆಗಳು ಹೊಳೆಯಬೇಕಾದರೆ ತಲೆಗೆ ಏನನ್ನು ಹಚ್ಚಿಕೊಳ್ಳಬೇಕು?

1/3 ಕುತೂಹಲ. 1/3 ಅಧ್ಯಯನ, 1/3 ಕಲ್ಪನೆಗಳನ್ನು ಹಚ್ಚಿಕೊಂಡರೆ ಸಾಕು.

ರತ್ನಾ ರಾಜ್‌ಕುಮಾರ್, ಹಾಸನ

ಕೆಲವರು ನಕ್ಕರೂ ಸಹ ಅಳುವವರ ಹಾಗೆ ಕಾಣುತ್ತಾರಲ್ಲಾ...?

ಬಹಳ ಗೋಳು ಸೀರಿಯಲ್‌ಗಳನ್ನು ನೋಡಿದುದರ ಪರಿಣಾಮವಂತೆ.

ಚನ್ನವೀರಪ್ಪ ಬಿದರಹಳ್ಳಿ, ಹಿರೇಹಡಗಲಿ

ಹವ್ಯಾಸ ಬದಲಿಸು, ಹಣೆಬರಹ ಬದಲಾದೀತು. ದೃಷ್ಟಿ ಬದಲಿಸು, ದೃಶ್ಯ ಬದಲಾದೀತು! ಇದು ಸತ್ಯವೆ?

ಅಂತರ ಗುರುತಿಸುವ ವಿಚಕ್ಷಣೆ ಇದ್ದರೆ ಮಾತ್ರ.

ಶಾಂತ ಗೌಡ, ಬೆಂಗಳೂರು

'ಯಾಸಗಾತಿಗೆ ಒಂದು ಕೂಸಿನ ನೆವ' ಸರಿ. 'ಕಳ್ಳನಿಗೆ ಒಂದು ಪಿಳ್ಳೆ ನೆವ' ಹೇಗೆ?

ರೈಡಾದ ತಕ್ಷಣ ಎದೆ ಹಿಡಿದುಕೊಂಡು ಪಿಲ್ ತೆಗೆದುಕೊಳ್ಳುವರಲ್ಲಾ... ಹಾಗೇ. ಪಿಳ್ಳೆ ಎಂದರೆ ಕ್ಷುಲ್ಲಕವೆಂದರ್ಥ.

ವಿ. ಹೇಮಂತಕುಮಾರ್, ಬೆಂಗಳೂರು

ಇಲಿ ಇರುವ ಜಾಗ ಬೆಕ್ಕಿಗೆ ಹೇಗೆ ತಿಳಿಯುತ್ತೆ?

ಕುಡುಕನಿಗೆ ಸಾರಾಯಿ ಅಂಗಡಿ ತಿಳಿಯುವಂತೆ ಮೂಗಿನಿಂದ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ದೇವರ ಭಯವೇ ಜ್ಞಾನಕ್ಕೆ ಮೂಲ ಎಂಬ ಬೋರ್ಡ್ ಇದೆ. ತಮ್ಮ ನಿಲುವೇನು?

ಭಯ ಭಕ್ತಿಗೆ ಮೂಲ; ಕುತೂಹಲ ಜ್ಞಾನಕ್ಕೆ ಮೂಲ.

ಗಡಿಯಾರದ ಸುಬ್ರಹ್ಮಣ್ಯ, ಬೆಂಗಳೂರು

ಅಮೃತ ಹಂಚಲು ಮೋಹಿನಿ ಬಂದಾಗ ಸುರಾಸುರರಿಗೆ ಅವಳು ಯಾರೆಂಬ ಅನುಮಾನ ಬರಲಿಲ್ಲವೇಕೆ?

ಸುಂದರಿಯರತ್ತ ಕಣ್ಣೋಡಿದಾಗ ತಲೆ ಓಡದಿರುವುದು ಸರ್ವಕಾಲಿಕ ಸತ್ಯ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

'ಏನೋ ಮಧುರ ಯಾತನೆ' ಎನ್ನುವ ವಾಕ್ಯದ ಸರಿಯಾದ ಉದಾಹರಣೆ ನೀಡುವಿರಾ ರಾಂ?

ಮುಕೇಶನ 'ಜೀನಾ ಯಹಾ ಮರನಾ ಯಹಾ' ಹಾಡು.

ರಾಜಶೇಖರ ಹಾದಿಮನಿ, ಧಾರವಾಡ

ದಿಢೀರ್ ಶ್ರೀಮಂತರಾದ ರಾಜಕಾರಣಿಗಳಿಗೆ ನಿಮ್ಮ ಸಂದೇಶ ಏನು ರಾಮ್‌ಜೀ?

ಹಾದಿ ಬಿಟ್ಟು money ಮಾಡಿಕೊಂಡವರಿಗೆ ಸಂದೇಶ ವ್ಯರ್ಥ ಹಾದಿಮನಿಯವರೆ.

## ಬಹುಮಾನಿತ ಪ್ರಶ್ನೆ

ಪಿ.ಜಿ. ರಾಘವೇಂದ್ರ, ಮೈಸೂರು

ಮೊಬೈಲ್ ಫೋನಿಗೂ ಪೆಟ್ರೋಲ್ ಹಾಕುವಂತಿದ್ದರೆ?

ದ್ವಿಚಕ್ರಿಗಳು ಪೆಟ್ರೋಲ್ ಟ್ಯಾಂಕ್ ಇರುವ ಹೆಲ್ಮೆಟ್ ಧರಿಸುತ್ತಿದ್ದರು.

ರಮೇಶ ಬೊಂಗಾಳೆ, ಬೈಲಹೊಂಗಲ

ನ್ಯಾಯಕ್ಕೆ ಕಣ್ಣಿಲ್ಲ. ಅನ್ಯಾಯಕ್ಕೆ?

ಕಿವಿಯಿಲ್ಲ.

ಗಂಜಾಂ ನಾಗರಾಜ, ಮೈಸೂರು

ತಾಳಿ ಕಟ್ಟುವಾಗ ಪುರೋಹಿತರು 'ಗಟ್ಟಿಮೇಳ ಗಟ್ಟಿಮೇಳ' ಎಂದು ವಾದ್ಯದವರಿಗೆ ಹೇಳಿ ಬಜಾಯಿಸುವುದೇಕೆ?

ಅದು ವಧುವರರಿಗೊಂದು ಸೌಂಡ್ ಟೆಸ್ಟ್. ಆ ಸದ್ದನ್ನು ತಡೆದುಕೊಂಡರೆ ಎಂತಹ ಏರುದನಿಯ ಬೈಗಳನ್ನೂ ತಡೆದುಕೊಳ್ಳಬಹುದಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಮಗುವನ್ನು ಹೆಗಲ ಮೇಲೆ ಕೂಡಿಸಿಕೊಳ್ಳುವುದೇಕೆ?



ತನ್ನ ದೃಷ್ಟಿಗಿಂತ ಮಗುವಿನ ದೃಷ್ಟಿ ಉನ್ನತ ಮಟ್ಟದಲ್ಲಿರಲಿ ಎಂಬ ಸದಾಶಯ.

ಕಾವ್ಯಶ್ರೀ ಪತ್ರಿಮಠ, ಸುರಪುರ

ಎಲ್ಲಾ ಬಲ್ಲ ವೈದ್ಯರೂ ಕಾಯಿಲೆ ಬೀಳುವರಲ್ಲಾ...?

ಒಳ್ಳೆಯದೇ. ನೋವನ್ನು ಅರಿತು ಚಿಕಿತ್ಸೆ ಕೊಡುವುದು ಪುಸ್ತಕ ಓದಿ ಕೊಡುವುದಕ್ಕಿಂತ ಮೇಲು.

ಪಿ.ಎನ್. ಶ್ರೀವತ್ಸ, ಬೆಂಗಳೂರು

ಸಾವನ್ನಪ್ಪುವುದು ಯಾವಾಗ ಶ್ರೇಷ್ಠ ಹಗಲಲ್ಲೋ, ಇರುಳಲ್ಲೋ?

ಸಂಜೆಯಲ್ಲಿ ಜೀವನದ ಸಂಜೆಯಲ್ಲಿ.

■ ರಾಮ್